ಕರ್ನಾಟಕ ಸರ್ಕಾರ
ಆರ್ಥಿಕ ಇಲಾಖೆ
Government of Karnataka
Finance Department

# ಆಯವ್ಯಯ ದಾಖಲೆ ಪತ್ರಗಳಿಗೊಂದು ಕೀಲಿಕೈ

# *Key to Budget Documents*

# 2010

# ಮುನ್ನುಡಿ

'ಆಯವ್ಯಯ ದಾಖಲೆ ಪತ್ರಗಳಿಗೊಂದು ಕೀಲಿಕೈ' (ಕೀ ಟು ಬಜೆಟ್ ಡಾಕ್ಯುಮೆಂಟ್ಸ್) ಇದನ್ನು ವಿಧಾನಮಂಡಲಕ್ಕೆ ಮಂಡಿಸುವ ಆಯವ್ಯಯ ದಾಖಲೆಪತ್ರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲು ತಯಾರಿಸಲಾಗಿದೆ. ಉತ್ಸುಕರು ಆಯವ್ಯಯ ದಾಖಲೆಗಳಲ್ಲಿರುವ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿಕೊಳ್ಳಲು ಸರಾಗವಾಗುವಂತೆ, ಆಯವ್ಯಯ ದಾಖಲೆಪತ್ರಗಳಿಗೊಂದು ಕೀಲಿಕೈ" ಅವರಿಗೆ ಸೂಕ್ತ ಮಾರ್ಗ ನಕಾಶೆ ಒದಗಿಸುತ್ತದೆ. ಆಯವ್ಯಯ ದಾಖಲೆಗಳು ನಾಗರೀಕರಿಗೆ ಸುಲಭವಾಗಿ ತಿಳಿಯುವಂತೆ ಮಾಡುವ ಹಾಗೂ ಆಯವ್ಯಯ ಪ್ರಕ್ರಿಯೆಯ ಕ್ಲಿಷ್ಟತೆಯನ್ನು ಕಳಚುವ ಉದ್ದೇಶದಿಂದ ಈ ದಾಖಲೆಪತ್ರವನ್ನು ಸಿದ್ಧಪಡಿಸಲಾಗಿದೆ. "ಆಯವ್ಯಯ ದಾಖಲೆಪತ್ರಗಳಿಗೊಂದು ಕೀಲಿಕೈ" ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002ರ 5ನೇ ಪ್ರಕರಣದಲ್ಲಿ ನಿರೂಪಿಸಿರುವಂತೆ ಪಾರದರ್ಶಕತೆಯ ಸ್ಫೂರ್ತಿಯನ್ನು ಮುಂದಕ್ಕೆ ಕೊಂಡೊಯ್ಯಲು ಕೈಗೊಂಡಿರುವ ಒಂದು ಪುಟ್ಟ ಹೆಜ್ಜೆಯಾಗಿದೆ.

ಈ ದಾಖಲೆ ಇತರ ವಿಷಯಗಳ ಜೊತೆಗೆ, ಈ ಮುಂದಿನ ಪ್ರಶ್ನೆಗಳನ್ನು ಉತ್ತರಿಸುತ್ತದೆ.

ಎ. ವಿಧಾನಮಂಡಲಕ್ಕೆ ಮಂಡಿಸುವಂತಹ ದಾಖಲೆಗಳು ಯಾವುವು?

ಬಿ. ಏಕೆ ಇಷ್ಟೊಂದು ದಾಖಲೆಗಳನ್ನು ಮಂಡಿಸಬೇಕು ?

ಸಿ. ಜನರಿಂದ ಹೇಗೆ ಹಣವನ್ನು ಪಡೆಯಲಾಗುತ್ತದೆ ಮತ್ತು ಅವರಿಗೆ ಹೇಗೆ ಹಿಂದಿರುಗಿಸಲಾಗುತ್ತದೆ.

ಡಿ. ಆಯವ್ಯಯ ಅಥವಾ ವಾರ್ಷಿಕ ವಿತ್ತೀಯ ನಿರೂಪಣೆ ಎಂದರೇನು?

ಇ. ಸರ್ಕಾರದ ವಿತ್ತೀಯ ಹೊಣೆಗಾರಿಕೆಗಳು ಯಾವುವು?

ಎಫ್. ಹಿಂದಿನ ಆಯವ್ಯಯ ಭಾಷಣದಲ್ಲಿಯ ಹಣಕಾಸು ಸಚಿವರ ಘೋಷಣೆಗಳ ಅನುಷ್ಠಾನದ ಸ್ಥಿತಿಗತಿ ಏನು?

***

## ಕರ್ನಾಟಕ ಸರ್ಕಾರದ ಆಯವ್ಯಯ ದಾಖಲೆಪತ್ರಗಳಿಗೊಂದು ಕೀಲಿಕೈ


| | ವಿಷಯಾನುಕ್ರಮಣಿಕೆ | ಪುಟ ಸಂಖ್ಯೆ |
|---|---|---|
| ಎ | ವಾರ್ಷಿಕ ವಿತ್ತ ನಿರೂಪಣೆ | 2 |
| ಬಿ | ಸಂಕ್ಷಿಪ್ತ ಅನುದಾನಗಳ ಅಭಿಯಾಚನೆ ಮತ್ತು ಪ್ರಭೃತ ವಿನಿಯೋಗ (ಭಾಗ 1 ಮತ್ತು 2) | 5 |
| ಸಿ | ವೆಚ್ಚದ ಸಲುವಾಗಿ ಲೇಖಾನುದಾನ | 5 |
| ಡಿ | ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು | 6 |
| ಇ | ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು (ಸಂಪುಟ 1 ರಿಂದ 8) | 6 |
| ಎಫ್ | ಲೋಕೋಪಯೋಗಿ ಕಾಮಗಾರಿಗಳ ಸವಿವರ ವೆಚ್ಚದ ಅಂದಾಜುಗಳು | 7 |
| ಜಿ | ನೀರಾವರಿಯ ಸವಿವರ ವೆಚ್ಚದ ಅಂದಾಜುಗಳು | 7 |
| ಹೆಚ್ | ರಾಜಸ್ವ ಮತ್ತು ಇತರೆ ಜಮೆಗಳ ಸವಿವರ ಅಂದಾಜುಗಳು | 7 |
| ಐ | ಆಯವ್ಯಯದ ಪಕ್ಷಿನೋಟ | 8 |
| ಜೆ | ಆಯವ್ಯಯದ ಮುಖ್ಯಾಂಶಗಳು | 9 |
| ಕೆ | ಆಯವ್ಯಯದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ. | 9 |
| ಎಲ್ | ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ | 9 |
| ಎಂ | ಆಯವ್ಯಯ ಜ್ಞಾಪನ ಪತ್ರ (ಖಾತರಿ. ಶೇರುಗಳು, ಸೆಕ್ಯೂರಿಟಿ ಇತ್ಯಾದಿಗಳ ವಿವರಣೆ) | 10 |
| ಎನ್ | ಮಹಿಳಾ ಉದ್ದೇಶಿತ ಆಯವ್ಯಯ | 10 |
| ಒ | ಆಯವ್ಯಯ ಅಂದಾಜುಗಳು ಅನುಬಂಧ–ಬಿ (ರಾಜ್ಯ ಮಟ್ಟದ್ದು) | 11 |
| ಪಿ | ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ವೇತನದ ವಿವರ ಅನುಬಂಧ–ಬಿ (ಸಿಬ್ಬಂದಿ) | 11 |
| ಕ್ಯೂ | ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ, ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ. | 11 |
| ಆರ್ | ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ಯೋಜನೆ ಮತ್ತು ಯೋಜನೇತರ ಹಣದ ವಿವರ (ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಕಾರ್ಯಕ್ರಮಗಳನ್ವಯ)(ಸಂಪುಟ 1 ರಿಂದ 4). | 12 |

## ***ಕರ್ನಾಟಕ ಸರ್ಕಾರದ ಆಯವ್ಯಯ ದಾಖಲೆಗಳ ಗ್ರಹಿಕೆ/ಸಾರಾಂಶ ಸೂಚಿ***

ಹಣಕಾಸು ಸಚಿವರ ಭಾಷಣದ ಜೊತೆಗೆ ಈ ಮುಂದೆ ಪಟ್ಟಿ ಮಾಡಿರುವ ಆಯವ್ಯಯ ದಾಖಲೆಗಳನ್ನೂ ವಿಧಾನ ಸಭೆಯಲ್ಲಿ ಮಂಡಿಸಲಾಗುತ್ತದೆ.

- ಎ ವಾರ್ಷಿಕ ವಿತ್ತ ನಿರೂಪಣೆ
- ಬಿ ಸಂಕ್ಷಿಪ್ತ ಅನುದಾನಗಳ ಅಭಿಯಾಚನೆ ಮತ್ತು ಪ್ರಭೃತ ವಿನಿಯೋಗ (ಭಾಗ 1 ಮತ್ತು 2)
- ಸಿ ವೆಚ್ಚದ ಸಲುವಾಗಿ ಲೇಖಾನುದಾನ
- ಡಿ ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು
- ಇ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು (ಸಂಪುಟ 1 ರಿಂದ 8)
- ಎಫ್ ಲೋಕೋಪಯೋಗಿ ಕಾಮಗಾರಿಗಳ ಸವಿವರ ವೆಚ್ಚದ ಅಂದಾಜುಗಳು
- ಜಿ ನೀರಾವರಿಯ ಸವಿವರ ವೆಚ್ಚದ ಅಂದಾಜುಗಳು
- ಹೆಚ್ ರಾಜಸ್ವ ಮತ್ತು ಇತರೆ ಜಮೆಗಳ ಸವಿವರ ಅಂದಾಜುಗಳು
- ಐ ಆಯವ್ಯಯದ ಪಕ್ಷಿನೋಟ
- ಜೆ ಆಯವ್ಯಯದ ಮುಖ್ಯಾಂಶಗಳು
- ಕೆ ಆಯವ್ಯಯದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ.
- ಎಲ್ ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ
- ಎಂ ಆಯವ್ಯಯ ಜ್ಞಾಪನ ಪತ್ರ (ಖಾತರಿ, ಶೇರುಗಳು, ಸೆಕ್ಯೂರಿಟಿ ಇತ್ಯಾದಿಗಳ ವಿವರಣೆ)
- ಎನ್ ಮಹಿಳಾ ಉದ್ದೇಶಿತ ಆಯವ್ಯಯ
- ಒ ಆಯವ್ಯಯ ಅಂದಾಜುಗಳು ಅನುಬಂಧ–ಬಿ (ರಾಜ್ಯ ಮಟ್ಟದ್ದು)
- ಪಿ ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ವೇತನದ ವಿವರ ಅನುಬಂಧ–ಬಿ
- ಕ್ಯೂ ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ, ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ.
- ಆರ್ ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ಯೋಜನೆ ಮತ್ತು ಯೋಜನೇತರ ಹಣದ ವಿವರ (ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಕಾರ್ಯಕ್ರಮಗಳನ್ವಯ)(ಸಂಪುಟ 1 ರಿಂದ 4).

ಕ್ರಮಸಂಖ್ಯೆ ಎ,ಬಿ,ಸಿ ಯಲ್ಲಿ ಉಲ್ಲೇಖಿಸಿರುವ ದಾಖಲೆಗಳು ಅನುಕ್ರಮವಾಗಿ, ಭಾರತೀಯ ಸಂವಿಧಾನದ ಪರಿಚ್ಛೇದ 202, 203, 206(1)(ಎ) ರೀತ್ಯಾ ನಿರ್ದೇಶಿಸಲ್ಪಟ್ಟಿವೆ. ಕ್ರಮಸಂಖ್ಯೆ ಡಿ ಯಲ್ಲಿ ಉಲ್ಲೇಖಿಸಿರುವ ದಾಖಲೆಯನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002 (ಕೆ.ಎಫ್.ಆರ್.ಎ.2002) ಭಾಗ 3ರ ಅನುಸರಣೆ ರೀತ್ಯಾ ಮಂಡಿಸಿದೆ. ಇನ್ನುಳಿದ ದಾಖಲೆಗಳು ನಿರ್ದೇಶಿತ ದಾಖಲೆಗಳಿಗೆ ಪೂರಕವಾಗಿದ್ದು ವಿವರಣೆಯನ್ನು ಅಥವಾ ಸಾಂದರ್ಭಿಕವಾಗಿ ತಕ್ಷಣ

ಅರ್ಥಮಾಡಿಕೊಳ್ಳುವುದಕ್ಕೆ ಹೊಂದುವಂತೆ ಓದುಗ ಸ್ನೇಹಿ ಮಾದರಿಯಲ್ಲಿ ಇನ್ನಿತರ ಮಾಹಿತಿಯನ್ನು ನೀಡುತ್ತವೆ. ಈ ದಾಖಲೆಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿವೆ. ಇವುಗಳಲ್ಲಿ ಕೆಲವು ದಾಖಲೆಗಳನ್ನು ಮಾಹಿತಿ ಜಾಲ ತಾಣ http://www.kar.nic.in/finance/bud2009/bud2009.htm. ಇದರಲ್ಲಿ ಅಳವಡಿಸಲಾಗಿದೆ.

ಈವರೆಗೆ ವಿವರಿಸಿದ ದಾಖಲೆಗಳ ಜೊತೆಗೆ, ಇಲಾಖೆಗಳು ತಮ್ಮ ತಮ್ಮ ವಾರ್ಷಿಕ ವರದಿಗಳನ್ನು ವಿಧಾನಮಂಡಲಕ್ಕೆ ಒಪ್ಪಿಸುತ್ತವೆ. ಪ್ರಸಕ್ತ ಸಾಲಿನಲ್ಲಿ ರಾಜ್ಯದ ಆರ್ಥಿಕ ಪ್ರವೃತ್ತಿಗಳ ಮುಖ್ಯಾಂಶಗಳನ್ನು ಒಳಗೊಂಡು, ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಬಳಕೆಯ ಪ್ರವೃತ್ತಿಗಳನ್ನು ಸೂಕ್ತ ಗ್ರಹಿಕೆ ಸಾಧ್ಯವಾಗಿಸುವ ಆರ್ಥಿಕ ಸಮೀಕ್ಷೆಯನ್ನು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ಹೊರತರುತ್ತದೆ. ಆರ್ಥಿಕ ಸಮೀಕ್ಷೆಯನ್ನು ಸಾಮಾನ್ಯವಾಗಿ ಆಯವ್ಯಯಕ್ಕೂ ಮುನ್ನವೇ ಮಂಡಿಸಲಾಗುತ್ತದೆ. ಈ ವರದಿಯನ್ನು ಇಲಾಖೆಯ ಮಾಹಿತಿ ಜಾಲತಾಣ http://des.kar.nic.in/indexie.html ಇದರಲ್ಲಿ ಅಳವಡಿಸಲಾಗಿರುತ್ತದೆ.

**ಎ. ವಾರ್ಷಿಕ ವಿತ್ತ ನಿರೂಪಣೆ (ಎಎಫ್ಎಸ್):**

ವಾರ್ಷಿಕ ವಿತ್ತ ನಿರೂಪಣೆಯು, ಪ್ರಸಕ್ತ ಸಾಲಿನ ಅಂದಾಜುಗಳಿಗೆ ಹಾಗೂ ಕಳೆದ ಸಾಲಿನ ವೆಚ್ಚಗಳಿಗೆ ಸಂಬಂಧಿಸಿದಂತೆ ಮುಂದಿನ ಸಾಲಿಗಾಗಿ ರಾಜ್ಯ ಸರ್ಕಾರವು ಪಡೆಯಬಹುದಾದ ಅಂದಾಜಿತ ಜಮೆಗಳು ಮತ್ತು ವಿತರಣೆಗಳನ್ನು ತೋರಿಸುವಂಥ ಪ್ರಮುಖ ಆಯವ್ಯಯ ದಾಖಲೆಯಾಗಿದೆ. ಈ ನಿರೂಪಣೆಯು, ಸರ್ಕಾರದ ಲೆಕ್ಕಗಳನ್ನು ಇಡಲಾಗಿರುವ ಅ) ಸಂಚಿತ ನಿಧಿ, ಆ) ಸಾಧಿಲ್ವಾರು ನಿಧಿ ಮತ್ತು ಇ) ಸಾರ್ವಜನಿಕ ಲೆಕ್ಕ ಈ ಮೂರು ವಿಭಾಗಗಳಲ್ಲಿ ಸರ್ಕಾರದ ಜಮೆಗಳು ಮತ್ತು ವಿತರಣೆಗಳನ್ನು ತೋರಿಸುತ್ತದೆ:

ಸರ್ಕಾರವು ಪಡೆದ ಎಲ್ಲಾ ರಾಜಸ್ವಗಳು, ಸರ್ಕಾರವು ಎತ್ತಿದ ಸಾಲಗಳು ಹಾಗೂ ಸಂಚಿತ ನಿಧಿಯಿಂದ ಸರ್ಕಾರವು ಮಂಜೂರು ಮಾಡಿದ ಸಾಲಗಳ ವಸೂಲಾತಿಗಳಿಂದ ಬಂದ ಅದರ ಜಮೆಗಳು [ಸಂವಿಧಾನದ ಅನುಚ್ಛೇದ 266 (1)] ಇವೆಲ್ಲವೂ ಒಟ್ಟುಗೂಡಿ ಸಂಚಿತ ನಿಧಿ ಆಗುತ್ತದೆ. ಸರ್ಕಾರದ ಎಲ್ಲಾ ವೆಚ್ಚವನ್ನು ಸಂಚಿತ ನಿಧಿಯಿಂದ ಭರಿಸಲಾಗುತ್ತದೆ. ವಿಧಾನಮಂಡಲದಿಂದ ಈ ಬಗ್ಗೆ ಅಂಗೀಕಾರ ಪಡೆಯದೆ ನಿಧಿಯಿಂದ ಯಾವುದೇ ಹಣವನ್ನು ತೆಗೆಯುವಂತಿಲ್ಲ.

ಸರ್ಕಾರವು ವಿಧಾನಮಂಡಲದಿಂದ ಅಂಗೀಕಾರ ಪಡೆಯುವುದು ಇತ್ಯರ್ಥದಲ್ಲಿರುವಾಗ ತುರ್ತು ಅನಿರೀಕ್ಷಿತ ವೆಚ್ಚಗಳನ್ನು ಭರಿಸಬೇಕಾಗುವ ಸಂದರ್ಭಗಳು ಉದ್ಭವಿಸಬಹುದು. ಭಾರತ ಸಂವಿಧಾನದ ಅನುಚ್ಛೇದ 267 (2)ರ ಅನುಸಾರವಾಗಿ, ರಾಜ್ಯ ವಿಧಾನಮಂಡಲವು ಒಂದು ಸಾಧಿಲ್ವಾರು ನಿಧಿಯನ್ನು ಸ್ಥಾಪಿಸಿದ್ದು, ಇದು ಒಂದು ಕೈಹಣದ ಸ್ವರೂಪದ್ದಾಗಿದೆ. ಈ ನಿಧಿಯನ್ನು ಕರ್ನಾಟಕ ಸಾಧಿಲ್ವಾರು ನಿಧಿ ಅಧಿನಿಯಮ, 1957ರ ಅನುಸಾರ ಹಣಕಾಸು ಇಲಾಖೆಯ ಪ್ರಭಾರವನ್ನು ಹೊಂದಿರುವ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಿರ್ವಹಿಸಿರುತ್ತಾರೆ. ಅಂಥ ವೆಚ್ಚಕ್ಕಾಗಿ ಮತ್ತು ಸಂಚಿತ ನಿಧಿಯಿಂದ ಅದಕ್ಕೆ ಸರಿಸಮನಾದ ಹಣದ ಪಡೆಯುವಿಕೆಗಾಗಿ ವಿಧಾನಮಂಡಲದ ಅನುಮೋದನೆಯನ್ನು ತದನಂತರ ಪಡೆದು ಮತ್ತು ಸಾದಿಲ್ವಾರು ನಿಧಿಯಿಂದ ಖರ್ಚುಮಾಡಲಾದ ಹಣವನ್ನು ಅದೇ ನಿಧಿಗೆ ತುಂಬಿಕೊಡಲಾಗುತ್ತದೆ. ವಿಧಾನಮಂಡಲದಿಂದ ಅಂಗೀಕಾರ ಪಡೆಯಲಾದ ನಿಧಿಯ ಮೂಲದ್ರವ್ಯವು 8,000 ಲಕ್ಷ ರೂಪಾಯಿಗಳಾಗಿದೆ.

ಸಂಚಿತ ನಿಧಿಗೆ ಸಂಬಂಧಿಸಿದ ಸರ್ಕಾರದ ಸಾಮಾನ್ಯ ಜಮೆಗಳು ಮತ್ತು ವೆಚ್ಚಗಳಲ್ಲದೆ, ಇನ್ನಿತರ ಕೆಲವು ವಹಿವಾಟುಗಳು ಸರ್ಕಾರದ ಲೆಕ್ಕಕ್ಕೆ ಸೇರುತ್ತವೆ; ಅಂತಹ ವಹಿವಾಟುಗಳಲ್ಲಿ ಸರ್ಕಾರವು ಬಹುತೇಕ ಬ್ಯಾಂಕರ್‌ನಂತೆ ನಡೆದುಕೊಳ್ಳುತ್ತದೆ. ಅವುಗಳೆಂದರೆ, ರಾಜ್ಯ ಭವಿಷ್ಯನಿಧಿಗಳು, ವಿಮಾ ಮತ್ತು ಪಿಂಚಣಿ ನಿಧಿಗಳು, ಮತ್ತು ಹೀಗೆ ಜಮೆಯಾದ ಹಣವನ್ನು ಸಾರ್ವಜನಿಕ ಲೆಕ್ಕದಲ್ಲಿ ಇಡಲಾಗುತ್ತದೆ ಮತ್ತು ಸಂಬಂಧಪಟ್ಟ ವಿತರಣೆಗಳನ್ನು ಸಹ ಇದರಿಂದ ಮಾಡಲಾಗುತ್ತದೆ (ಸಂವಿಧಾನದ ಅನುಚ್ಛೇದ 266(2)). ಸಾಮಾನ್ಯವಾಗಿ ಹೇಳುವುದಾದರೆ, ಸಾರ್ವಜನಿಕ ಲೆಕ್ಕದ ನಿಧಿ ಸರ್ಕಾರಕ್ಕೆ ಸೇರಿದ್ದಲ್ಲ ಮತ್ತು ಅವುಗಳನ್ನು ಒಂದಲ್ಲಾ ಒಂದು ಸಾರಿ ಠೇವಣಿಯಾಗಿಟ್ಟಂಥ ವ್ಯಕ್ತಿಗಳಿಗೆ ಮತ್ತು ಪ್ರಾಧಿಕಾರಗಳಿಗೆ ಹಿಂದಿರುಗಿಸಬೇಕಾಗುತ್ತದೆ. ಆದ್ದರಿಂದ, ಸಾರ್ವಜನಿಕ ನಿಧಿಯಿಂದ ಸಂದಾಯಮಾಡುವುದಕ್ಕೆ ವಿಧಾನಮಂಡಲದ ಅಂಗೀಕಾರ ಬೇಕಾಗಿರುವುದಿಲ್ಲ.

ಸಂವಿಧಾನದ ಅನುಚ್ಛೇದ 202 (2) (ಬಿ)ಯ ಮೇರೆಗೆ, ಆಯವ್ಯಯದಲ್ಲಿ ರಾಜಸ್ವ ವೆಚ್ಚವನ್ನು ಇನ್ನಿತರ ವೆಚ್ಚಗಳಿಂದ ಪ್ರತ್ಯೇಕಿಸಿ ತೋರಿಸಬೇಕಾಗಿದೆ. ಆದ್ದರಿಂದ, ವಾರ್ಷಿಕ ವಿತ್ತ ನಿರೂಪಣೆಯು (ಅ) ರಾಜಸ್ವ ಲೆಕ್ಕ ಮತ್ತು (ಆ) ಬಂಡವಾಳ ಲೆಕ್ಕವನ್ನು ಒಳಗೊಂಡಿರುತ್ತದೆ.

ರಾಜಸ್ವ ಲೆಕ್ಕದಲ್ಲಿ, ಸರ್ಕಾರದ ರಾಜಸ್ವ ಜಮೆಗಳು (ತೆರಿಗೆ ರಾಜಸ್ವಗಳು ಮತ್ತು ಇತರ ರಾಜಸ್ವಗಳು) ಮತ್ತು ಈ ರಾಜಸ್ವಗಳಿಂದ ಭರಿಸಲಾದ ವಿತರಣೆಗಳು ಒಳಗೊಂಡಿರುತ್ತವೆ. ತೆರಿಗೆ ರಾಜಸ್ವಗಳಲ್ಲಿ ರಾಜ್ಯವು ವಿಧಿಸಿದ ತೆರಿಗೆಗಳು ಮತ್ತು ಇತರ ಶುಲ್ಕಗಳ ಹುಟ್ಟುವಳಿಗಳು ಸೇರಿರುತ್ತವೆ. ಬಜೆಟ್ ಅಧಿವೇಶನದ ಕಾಲದಲ್ಲಿ ಸಂಬಂಧಪಟ್ಟ ಇಲಾಖೆಗಳು ವಿಧಾನಸಭೆಯ ಮುಂದೆ

ಮಂಡಿಸಬೇಕಾದ ಹಣಕಾಸು ಮಸೂದೆಗಳು ಒಳಗೊಂಡಿರುವಂಥ ತೆರಿಗೆ ವಿಧಿಸುವಿಕೆ ಪ್ರಸ್ತಾವಗಳ ಪರಿಣಾಮವನ್ನು ಗಣನೆಗೆ ತೆಗೆದುಕೊಂಡು ವಾರ್ಷಿಕ ವಿತ್ತ ನಿರೂಪಣೆಯಲ್ಲಿ ರಾಜಸ್ವ ಜಮೆಗಳ ಅಂದಾಜುಗಳನ್ನು ತೋರಿಸಲಾಗುತ್ತದೆ. ಸರ್ಕಾರದ ಇತರ ಜಮೆಗಳಲ್ಲಿ ಮುಖ್ಯವಾಗಿ ಸರ್ಕಾರವು ಹೂಡಿದ ಬಂಡವಾಳ ಗಳಿಸಿದ ಬಡ್ಡಿ, ಲಾಭಾಂಶ ಮತ್ತು ಸರ್ಕಾರವು ಒದಗಿಸಿದ ಸೇವೆಗಳಿಗಾಗಿ ಪಡೆದ ಇತರ ಜಮೆಗಳು ಸೇರಿರುತ್ತವೆ. ರಾಜಸ್ವ ವೆಚ್ಚವು, ಸಾಮಾನ್ಯವಾಗಿ, ಸರ್ಕಾರದ ಇಲಾಖೆಗಳ ಮತ್ತು ವಿವಿಧ ಸೇವೆಗಳ ಸಾಮಾನ್ಯ ನಿರ್ವಹಣೆಗಾಗಿ, ಸರ್ಕಾರವು ಮಾಡುವ ಸಾಲದ ಮೇಲಿನ ಬಡ್ಡಿಪಾವತಿಗಳು, ಸಹಾಯಧನಗಳು, ಮುಂತಾದವುಗಳಿಗಾಗಿ ವೆಚ್ಚ ಮಾಡಲು ಇರುತ್ತದೆ. ಸ್ಥೂಲವಾಗಿ ಹೇಳುವುದಾದರೆ, ಆಸ್ತಿಗಳ ಸೃಜನೆಗೆ ಕಾರಣವಾಗದಿರುವಂಥ ವೆಚ್ಚವನ್ನು ರಾಜಸ್ವ ವೆಚ್ಚವೆಂದು ಪರಿಗಣಿಸಲಾಗಿದೆ.

ಬಂಡವಾಳ ಲೆಕ್ಕದಲ್ಲಿ ಬಂಡವಾಳ ಜಮೆಗಳು ಮತ್ತು ವಿತರಣೆಗಳು ಒಳಗೊಂಡಿರುತ್ತವೆ. ಮಾರುಕಟ್ಟೆ ಸಾಲಗಳು ಎಂದು ಕರೆಯಲಾಗುವ ಸಾರ್ವಜನಿಕರಿಂದ ಎತ್ತುವಳಿ ಮಾಡುವ ಸಾಲಗಳು, ಸರ್ಕಾರವು ರಿಸರ್ವ್ ಬ್ಯಾಂಕ್‌ನಿಂದ ಪಡೆಯುವ ಮುಕ್ತವಲ್ಲದ ಎತ್ತುವಳಿಗಳು (ಟ್ರೈಡ್ ಬಾರೋಯಿಂಗ್ಸ್) ವಿದೇಶಿ ಸರ್ಕಾರಗಳು ಮತ್ತು ಬಹುಮುಖ ಸೇವೆಗಳ ಉದ್ದೇಶವುಳ್ಳ ಸಂಸ್ಥೆಗಳಿಂದ ಪಡೆದ ಸಾಲಗಳು, ರಾಜ್ಯ ಸರ್ಕಾರವು ಮಂಜೂರು ಮಾಡಿದ ಸಾಲಗಳ ವಸೂಲಾತಿಗಳು – ಇವು ಬಂಡವಾಳ ಜಮೆಗಳ ಪ್ರಮುಖ ಬಾಬುಗಳಾಗಿವೆ. ಬಂಡವಾಳ ಪಾವತಿಗಳಲ್ಲಿ, ಭೂಮಿ, ಕಟ್ಟಡಗಳು, ಯಂತ್ರೋಪಕರಣ, ಸಾಧನಸಾಮಗ್ರಿಗಳಂಥ ಆಸ್ತಿಗಳ ಆರ್ಜನೆಯ ಮೇಲಿನ ವೆಚ್ಚಗಳೇ ಅಲ್ಲದೆ ಷೇರು ಮೊದಲಾದವುಗಳಲ್ಲಿ ತೊಡಗಿಸುವ ಬಂಡವಾಳ ಹೂಡಿಕೆಗಳು, ಸಾರ್ವಜನಿಕ ಋಣದ ಮೇಲಿನ ಮತ್ತು ಸರ್ಕಾರಿ ಕಂಪನಿಗಳು, ನಿಗಮಗಳಿಗೆ ಹಾಗೂ ಸಹಕಾರ ಸಂಘಗಳಂಥ ಇತರ ಪಕ್ಷಕಾರರಿಗೆ ರಾಜ್ಯವು ಮಂಜೂರು ಮಾಡಿದ ಸಾಲಗಳು ಮತ್ತು ಮುಂಗಡಗಳ ಮೇಲಿನ ಬಂಡವಾಳ ವೆಚ್ಚವು ಸೇರಿರುತ್ತದೆ.

ಸಂವಿಧಾನದ ಅನುಚ್ಛೇದ 202 (3)ರ ಮೇರೆಗೆ, ರಾಜ್ಯಪಾಲರ ಸಂಬಳಗಳು ಮತ್ತು ಭತ್ಯೆಗಳು, ವಿಧಾನಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿಯವರ ಹಾಗೂ ವಿಧಾನಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಬಳಗಳು ಮತ್ತು ಭತ್ಯೆಗಳು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಬಳಗಳು, ಭತ್ಯೆಗಳು ಮತ್ತು ನಿವೃತ್ತಿವೇತನಗಳು, ಸರ್ಕಾರವು ಎತ್ತಿದ ಸಾಲಗಳ ಮೇಲಿನ ಬಡ್ಡಿ ಮತ್ತು ಸಾಲಗಳ ಮರುಪಾವತಿ ಹಾಗೂ ನ್ಯಾಯಾಲಯಗಳ ಡಿಕ್ರಿಗಳನ್ನು ಪರಿಪಾಲಿಸಲು ಮಾಡಲಾದ ಸಂದಾಯಗಳು ಮೊದಲಾದಂಥ ವೆಚ್ಚದ ಕೆಲವು ಬಾಬುಗಳನ್ನು ಸಂಚಿತ ನಿಧಿಗೆ ಪ್ರಭೃತಗೊಳಿಸಲಾಗುತ್ತದೆ ಮತ್ತು ಇವುಗಳಿಗೆ ವಿಧಾನಸಭೆಯ ಅಂಗೀಕಾರ ಪಡೆಯಬೇಕಾದ ಅಗತ್ಯವಿಲ್ಲ. ಸಂಚಿತ ನಿಧಿಯ ಮೇಲಿನ ಪ್ರಭೃತ ವೆಚ್ಚವನ್ನು ವಾರ್ಷಿಕ ವಿತ್ತ ನಿರೂಪಣೆಯಲ್ಲಿ ಪ್ರತ್ಯೇಕವಾಗಿ ತೋರಿಸಲಾಗಿದೆ.

**ಬಿ. ಸಂಕ್ಷಿಪ್ತ ಅನುದಾನಗಳ ಅಭಿಯಾಚನೆ ಮತ್ತು ಪ್ರಭೃತ ವಿನಿಯೋಗ ಭಾಗ– 1 ಮತ್ತು 2:**

ವಾರ್ಷಿಕ ವಿತ್ತ ನಿರೂಪಣೆಯಲ್ಲಿ ಸೇರಿಸಲಾಗಿರುವ ಮತ್ತು ವಿಧಾನಮಂಡಲದಿಂದ ಪುರಸ್ಕೃತಗೊಳ್ಳಬೇಕಾದ, ಸಂಚಿತ ನಿಧಿಯಿಂದ ಭರಿಸಬೇಕಾದ, ವೆಚ್ಚಗಳ ಅಂದಾಜುಗಳನ್ನು ಸಂವಿಧಾನದ ಅನುಚ್ಛೇದ 203ರ ರೀತ್ಯಾ ಅನುದಾನಗಳ ಅಭಿಯಾಚನೆಯ (ಡಿಮ್ಯಾಂಡ್ಸ್ ಫಾರ್ ಗ್ರ್ಯಾಂಟ್ಸ್) ರೂಪದಲ್ಲಿ ಸಲ್ಲಿಸಲಾಗುತ್ತದೆ. ಭಾರತ ಸಂವಿಧಾನದ ಅನುಚ್ಛೇದ 203 (3)ರ ರೀತ್ಯಾ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ಪ್ರಭೃತ ಬೇಡಿಕೆಯಲ್ಲದಿರುವ, ಸಂಚಿತ ನಿಧಿಯಿಂದ ಭರಿಸಬೇಕಾಗಿರುವ ವೆಚ್ಚಗಳ ಧನವಿನಿಯೋಗ ಪ್ರಸ್ತಾವನೆಯೇ ಅಭಿಯಾಚನೆ. ಪ್ರಭೃತ ವೆಚ್ಚಗಳಿಗಾಗಿನ ಅವಶ್ಯಕತೆಗಳನ್ನು ಪ್ರತ್ಯೇಕವಾಗಿ ತೋರಿಸಲಾಗಿದ್ದು, ಅವುಗಳು ಪುರಸ್ಕೃತಗೊಳ್ಳಬೇಕಿಲ್ಲವಾದರೂ ಚರ್ಚೆಗೆ ಒಳಪಡಬಹುದಾಗಿದೆ. ಸಾಧಾರಣವಾಗಿ ಒಂದು ಇಲಾಖೆಗೆ ಒಂದು ಅಭಿಯಾಚನೆ ಇರುತ್ತದೆಯಾದರೂ, ಕೆಲವೊಂದು ಸಂದರ್ಭಗಳಲ್ಲಿ ಒಂದು ಅಭಿಯಾಚನೆ ಎರಡು ಅಥವಾ ಅದಕ್ಕಿಂತ ಹೆಚ್ಚು ಇಲಾಖೆಗಳನ್ನು ಒಳಗೊಂಡಿರಬಹುದಾಗಿದೆ ಅಥವಾ ಯಾವುದೇ ಒಂದು ನಿರ್ದಿಷ್ಟ ಇಲಾಖೆಗೆ ವರ್ಗೀಕರಿಸಲಾಗದ ವೆಚ್ಚಗಳಿಗೆ ಸಂಬಂಧಿಸಿದ ಅಭಿಯಾಚನೆ ಇರಬಹುದು. ಇಲಾಖಾವಾರು/ಮುಖ್ಯ ಲೆಕ್ಕಶೀರ್ಷಿಕೆವಾರು ಅಂದಾಜುಗಳ ವಿವರಗಳನ್ನು ಈ ತಃಖ್ತೆಯಲ್ಲಿ ಒದಗಿಸಲಾಗಿದೆ. ಯಾವುದೇ ವಿನಿಯೋಜನೆ ಸಂಪೂರ್ಣವಾಗಿ ಸಂಚಿತ ನಿಧಿಯ ಮೇಲೆ ಪ್ರಭೃತ ಸ್ವರೂಪದ್ದಾಗಿದ್ದರೂ, ಉದಾಹರಣೆಗೆ ಬಡ್ಡಿ ಪಾವತಿಗಳು (ಅಭಿಯಾಚನೆ ಸಂಖ್ಯೆ 29 – ಸಾಲ ಸೇವೆಗಳು) ಅಂತಹವುಗಳನ್ನು ಒಂದು ಅಭಿಯಾಚನೆಯಡಿ ಸೇರಿಸಿ, ಅವುಗಳನ್ನು ಪುರಸ್ಕರಿಸಬೇಕಾಗಿಲ್ಲದಿದ್ದರೂ, ವಿಧಾನಮಂಡಲಕ್ಕೆ ಮಂಡಿಸಲಾಗುತ್ತದೆ.

**ಸಿ. ವೆಚ್ಚದ ಸಲುವಾಗಿ ಲೇಖಾನುದಾನ:**

ಭಾರತ ಸಂವಿಧಾನದ 204 (3)ನೇ ಅನುಚ್ಛೇದದ ಪ್ರಕಾರ ಬೇಡಿಕೆಗಳ ಪುರಸ್ಕಾರಕ್ಕಾಗಿ ಕಾರ್ಯವಿಧಾನದ ಮುಗಿಯುವಿಕೆ ಇತ್ಯರ್ಥದಲ್ಲಿರುವಾಗ, ಹಣಕಾಸು ವರ್ಷದ ಒಂದು ಭಾಗಕ್ಕಾಗಿ ಸಾಮಾನ್ಯವಾಗಿ 4 ತಿಂಗಳುಗಳಿಗೆ ಅಂದಾಜಿತ ವೆಚ್ಚದ ಸಂಬಂಧದಲ್ಲಿ ಮುಂಗಡವಾಗಿ ಯಾವುದೇ ಅನುದಾನವನ್ನು ನೀಡಲು ಭಾರತ ಸಂವಿಧಾನದ 206 (1) (ಎ) ಅನುಚ್ಛೇದದ ಮೂಲಕ ವಿಧಾನಮಂಡಲವು ಅಧಿಕಾರವನ್ನು ಹೊಂದಿರುತ್ತದೆ. ಇದು ಅಂದಾಜಿತ ವೆಚ್ಚದ ಅನುಸೂಚಿಯಾಗಿದ್ದು ಇದಕ್ಕಾಗಿ ಲೇಖಾನುದಾನವನ್ನು ತೆಗೆದುಕೊಳ್ಳಬೇಕಿದೆ. ಇದು ವರ್ಷದ ಒಟ್ಟು ಬೇಡಿಕೆಯನ್ನು ಮತ್ತು ಲೇಖಾನುದಾನಕ್ಕೆ ಒಳಗೊಳ್ಳುವ ವೆಚ್ಚವನ್ನು ಸೂಚಿಸುವಂತಿದ್ದು, ಇದು ಪ್ರತಿ 29 ಅಭಿಯಾಚನೆಗಳ ಅನುದಾನದ, ಸರಿಸುಮಾರು ಮೂರನೇ ಒಂದು ಭಾಗವಾಗಿರುತ್ತದೆ.

## ಡಿ. ಮಧ್ಯಮಾವಧಿ ವಿತ್ತೀಯ ಯೋಜನಾ ಅಂದಾಜುಗಳು:

ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ (ಕ.ವಿ.ಹೊ.ಅ) 2002)ರ 3ನೇ ಪ್ರಕರಣದ ಅನುಪಾಲನೆಯಲ್ಲಿ ಮಂಡಿಸಲಾಗುತ್ತದೆ. ಈ ದಾಖಲೆಪತ್ರದಲ್ಲಿ, ಸರ್ಕಾರದ ಮಧ್ಯಮಾವಧಿ ವಿತ್ತೀಯ ಧ್ಯೇಯೋದ್ದೇಶಗಳು (ಅಧ್ಯಾಯ–1), ಹಿಂದಿನ ವರ್ಷದಲ್ಲಿನ ಗೊತ್ತುಪಡಿಸಲಾದ ವಿತ್ತೀಯ ಸೂಚಕಗಳ ಕಾರ್ಯಕ್ಷಮತೆ ಮೌಲ್ಯಮಾಪನ (ಅಧ್ಯಾಯ–2), ಅಭಿವೃದ್ಧಿ ಮತ್ತು ಬೆಳವಣಿಗೆಯ ಇತ್ತೀಚಿನ ಆರ್ಥಿಕ ಪ್ರವೃತ್ತಿಗಳು ಮತ್ತು ನಿರೀಕ್ಷೆಗಳು (ಅಧ್ಯಾಯ–3), ಸರ್ಕಾರದ ಕಾರ್ಯತಂತ್ರ ಆದ್ಯತೆಗಳು ಮತ್ತು ಮುಖ್ಯ ವಿತ್ತೀಯ ನೀತಿಗಳು ಮತ್ತು ಅವುಗಳ ಸುಸಂಗತೆಯ ಮೌಲ್ಯಮಾಪನ (ಅಧ್ಯಾಯ 4–7), ನಾಲ್ಕು ವರ್ಷಗಳ ಉರುಳು ಗುರಿಗಳು (ಅಧ್ಯಾಯ–7), ರಾಜಸ್ವ ಕೊರತೆಗೆ ಸಮರ್ಥಿತವಾದ ಮೌಲ್ಯನಿರ್ಧಾರ ಮತ್ತು ಉತ್ಪಾದಕತೆ ಉದ್ದೇಶಗಳಿಗಾಗಿ ಬಂಡವಾಳ ಜಮೆಗಳ ಬಳಕೆಗಳನ್ನು ಒಳಗೊಂಡಿದೆ.

ಕೆಎಫ್ಆರ್ಎ ದಲ್ಲಿ ವಿಧಿಸಿರುವಂತೆ ಸಮಗ್ರ ಆರ್ಥಿಕ ದೃಷ್ಟಿಕೋನದ ವಿವರಣೆಯು ಮೂರನೇ ಅಧ್ಯಾಯದಲ್ಲಿದೆ. ಇದರಲ್ಲಿ ನಿರ್ದಿಷ್ಟ ಆಧಾರಭೂತ ಊಹೆಗಳೊಂದಿಗಿನ ಆರ್ಥಿಕ ಬೆಳವಣಿಗೆ ನಿರೀಕ್ಷೆಗಳ ಮೌಲ್ಯನಿರ್ದರಣೆ ಒಳಗೊಂಡಿದೆ. ಇದರಲ್ಲಿ ರಾಜ್ಯ ಸರ್ಕಾರದ ಜಿಎಸ್‌ಡಿಪಿ ಬೆಳವಣಿಗೆ ಪ್ರಮಾಣ ಮತ್ತು ವಿತ್ತೀಯ ಸಮತೋಲನೆಗೆ ಸಂಬಂಧಪಟ್ಟ ಮೌಲ್ಯನಿರ್ಧರಣೆಯು ಒಳಗೊಂಡಿದೆ. ಅಧ್ಯಾಯ ನಾಲ್ಕರಿಂದ ಏಳರಲ್ಲಿ, ವಿತ್ತೀಯ ನೀತಿ ಕಾರ್ಯತಂತ್ರದ ವಿವರಗಳು/ತೆರಿಗೆಗಳು, ವೆಚ್ಚಗಳು, ಪ್ರಾದೇಶಿಕ ಅಸಮತೋಲನೆಗಳ ಸರಿಪಡಿಸುವಿಕೆಗಳು, ಬಡ್ಡಿ ಸಂದಾಯಗಳು, ವೇತನಗಳು, ನಿವೃತ್ತಿ ವೇತನಗಳು ಮತ್ತು ಸಹಾಯಧನಗಳು, ಸಾರ್ವಜನಿಕ ಹಣಕಾಸು ವ್ಯವಸ್ಥಾಪನೆ ಮತ್ತು ವ್ಯವಸ್ಥಿತ ಸುಧಾರಣೆಗಳನ್ನು ಒಳಗೊಂಡಿದೆ. ಇದರಲ್ಲಿ ವಿತ್ತೀಯ ವಲಯದಲ್ಲಿ ಸರ್ಕಾರದ ಕಾರ್ಯತಂತ್ರ ಆಧ್ಯತೆಗಳನ್ನು, ಪ್ರಸಕ್ತ ನೀತಿಗಳು ಹೇಗೆ ದೃಢ ವಿತ್ತೀಯ ನಿರ್ವಹಣೆ ಮೂಲತತ್ವಗಳೊಂದಿಗೆ ಅನುರೂಪವಾಗಿದೆ ಮತ್ತು ಕೆಎಫ್ಆರ್ಎ ಪರಿಮಾಣದಲ್ಲಿ ಯಾವುದೇ ಮುಖ್ಯ ಬದಲಾವಣೆಗಾಗಿ ತಾರ್ಕಿಕಾಧಾರವಾಗಿದೆ ಎಂಬುದನ್ನು ವಿವರಿಸಲಾಗಿದೆ.

## ಇ. ಆಯವ್ಯಯ ಸವಿವರ ವೆಚ್ಚದ ಅಂದಾಜುಗಳು:

ಆಯವ್ಯಯ ವೆಚ್ಚದ ಸವಿವರವಾದ ಅಂದಾಜುಗಳ ಎಂಟು ಸಂಪುಟಗಳಿವೆ. ಅವುಗಳು ವಿವಿಧ ಇಲಾಖೆಗಳ ರಾಜಸ್ವ ಮತ್ತು ಬಂಡವಾಳ ಹಂಚಿಕೆಗಳ ವಿವರಗಳನ್ನು ಒಳಗೊಂಡಿರುತ್ತವೆ. ಪ್ರತಿಯೊಂದು ಲೆಕ್ಕ ಶೀರ್ಷಿಕೆಯಡಿ, 'ಯೋಜನೆ' ಮತ್ತು 'ಯೋಜನೇತರ' ವೆಚ್ಚದ ಅಂದಾಜುಗಳನ್ನು ಲಕ್ಷ

ರೂಪಾಯಿಗಳಲ್ಲಿ ನಮೂದಿಸಲಾಗಿದೆ. 'ಪುರಸ್ಕೃತ' ಅಥವಾ 'ಪ್ರಭೃತ' ಎಂಬ ವಿವರಗಳನ್ನು ಒದಗಿಸಲಾಗಿದೆ. ಪ್ರತಿಯೊಂದು ಸವಿವರ ಲೆಕ್ಕಶೀರ್ಷಿಕೆ (ಆಬ್ಜೆಕ್ಟ್‌ಹೆಡ್) ವರೆಗಿನ ಹಂಚಿಕೆ, ಹಿಂದಿನ ವರ್ಷದ ಲೆಕ್ಕಗಳು, ಬಜೆಟ್ ಅಂದಾಜುಗಳು, ಪ್ರಸಕ್ತ ವರ್ಷದ ಪರಿಷ್ಕೃತ ಅಂದಾಜುಗಳು ಮತ್ತು ಮುಂಬರುವ ವರ್ಷದ ಬಜೆಟ್ ಅಂದಾಜುಗಳನ್ನು ಈ ದಾಖಲೆ ಒಳಗೊಂಡಿದೆ. ಪ್ರತಿಯೊಂದು ಸಂಪುಟವು, ಮುಖ್ಯ ಶೀರ್ಷಿಕೆವಾರು ಗೋಷ್ವಾರೆ ಹೊಂದಿದ್ದು, ನಂತರದಲ್ಲಿ ಸವಿವರ (ಆಬ್ಜೆಕ್ಟ್ ಹೆಡ್) ಲೆಕ್ಕಶೀರ್ಷಿಕೆವರೆಗಿನ ವಿವರಗಳನ್ನು ಒಳಗೊಂಡಿದೆ. ಈ ಸಂಪುಟದಲ್ಲಿ ನಮೂದಿಸಿರುವ ವೆಚ್ಚದ ಅಂದಾಜುಗಳು, ಒಟ್ಟು ಮೊತ್ತವಾಗಿರುತ್ತವೆ. 'ಯೋಜನೆ' ಮತ್ತು 'ಯೋಜನೇತರ' ಗಳೆರಡರಲ್ಲು ಶಿಕ್ಷಣ, ಆರೋಗ್ಯ, ಲೋಕೋಪಯೋಗಿ, ನೀರಾವರಿ ಇತ್ಯಾದಿಗಳಂಥ ಕೆಲವು ಇಲಾಖೆಗಳಿಗೆ ವಿನಿಯೋಗವು ಒಂದು ಮುಖ್ಯ ಲೆಕ್ಕ ಶೀರ್ಷಿಕೆಗಿಂತ ಹೆಚ್ಚಿನ ಲೆಕ್ಕಶೀರ್ಷಿಕೆಗಳಲ್ಲಿರಬಹುದಾಗಿದೆ.

**ಎಫ್. ಲೋಕೋಪಯೋಗಿ ಕಾಮಗಾರಿಗಳ ಸವಿವರ ವೆಚ್ಚದ ಅಂದಾಜುಗಳು:**

ಈ ಸಂಪುಟದವು, ರಾಜ್ಯದಲ್ಲಿನ ಕಟ್ಟಡಗಳು, ರಸ್ತೆಗಳು, ಸೇತುವೆಗಳು, ಬಂದರುಗಳು ಮತ್ತು ಕೆಲಮಟ್ಟಿನ ವಸತಿಗೃಹಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಇರುವ ಬಜೆಟ್ ಹಂಚಿಕೆಯ ಕ್ರೋಢೀಕರಣವನ್ನು ಒಳಗೊಂಡಿದೆ. ಮುಂದುವರೆದು, ಆಯವ್ಯಯ ಅನುಮೋದನೆಯಾದ ನಂತರ, ಅನುಷ್ಠಾನ ಇಲಾಖೆಯು ಅನುಬಂಧ–ಇ ಎಂದು ಕರೆಯಲಾಗುವ ಪೂರಕ ದಾಖಲೆಯನ್ನು ಸಲ್ಲಿಸುತ್ತದೆ. ಈ ದಾಖಲೆಯು ಪ್ರಸ್ತಾಪಿತ ಕಾಮಗಾರಿಗಳ ವಿವರಗಳನ್ನು ಒಳಗೊಂಡಿರುತ್ತದೆ.

**ಜಿ. ನೀರಾವರಿಯ ಸವಿವರ ವೆಚ್ಚದ ಅಂದಾಜುಗಳು:**

ಇದನ್ನು ಲೋಕಾರೂಢಿಯಾಗಿ ನೀರಾವರಿ ಸಂಪುಟವೆಂದು ಕರೆಯಲಾಗುತ್ತದೆ. ಇದು ರಾಜ್ಯದಲ್ಲಿನ ನೀರಾವರಿ ಸಾಮರ್ಥ್ಯ ಸೃಜನೆ ಮತ್ತು ನಿರ್ವಹಣೆ ಕುರಿತಂತೆ ಹೊಂದಿರುವ ಆಯವ್ಯಯ ಅಂದಾಜುಗಳ ಒಂದು ಸಮಷ್ಠೀಕರಣವಾಗಿದೆ. ನೀರಾವರಿ ಕುರಿತ ಇಂತಹ ವಲಯಾಧಾರಿತ ಪ್ರತ್ಯೇಕಿತ ದತ್ತಾಂಶದ ತಯಾರಿಕೆಯು ತ್ವರಿತ ದೃಷ್ಟಿಯನ್ನು ಹರಿಸಲು ನೆರವಾಗುತ್ತದೆ.

**ಹೆಚ್. ರಾಜಸ್ವ ಮತ್ತು ಇತರೆ ಜಮೆಗಳ ಸವಿವರ ಅಂದಾಜು**

ವಾರ್ಷಿಕ ವಿತ್ತ ನಿರೂಪಣೆಯಲ್ಲಿ ಸೇರಿಸಲಾದ ಜಮೆಗಳ ಅಂದಾಜುಗಳ ಬಗ್ಗೆ ಈ ದಾಖಲೆಪತ್ರದಲ್ಲಿ ಹೆಚ್ಚಿನ–ವಿವರಣೆಯನ್ನು ನೀಡಲಾಗಿದೆ. ಈ ದಾಖಲೆಪತ್ರ ರಾಜ್ಯದ ಸಂಚಿತ ನಿಧಿಗೆ ಸೇರುವ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ ಜಮೆಗಳು ಮತ್ತು ಬಂಡವಾಳ ಜಮೆಗಳ ವಿವರಗಳನ್ನು ಒದಗಿಸುತ್ತದೆ ಹಾಗೂ ಅಂದಾಜುಗಳನ್ನು ನೀಡುತ್ತದೆ.

## ಐ. ಆಯವ್ಯಯದ ಪಕ್ಷಿನೋಟ:

ಈ ದಾಖಲೆಪತ್ರವು ವಿವಿಧ ವಿತ್ತೀಯ ಸೂಚಕಗಳು, ಮಾನದಂಡಗಳ ವಿವರಗಳು ಹಾಗೂ ಆಯವ್ಯಯದ ಪ್ರಮುಖ ವಿವರಗಳ ಚಿತ್ರಣವನ್ನು ನೀಡುತ್ತದೆ. ರಾಜಸ್ವ ಹಾಗೂ ಬಂಡವಾಳ ಜಮೆಗಳು, ಯೋಜನೇತರ ಹಾಗೂ ಯೋಜನಾ ವೆಚ್ಚ, ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ತತ್ಕಾಲದ ಅಚಿದಾಜು, ರಾಜಸ್ವ ಹಾಗೂ ವಿತ್ತೀಯ ಕೊರತೆಗಳು ಮತ್ತು ಹಿಂದಿನ ವರ್ಷ ಹಾಗೂ ಪ್ರಸಕ್ತ ವರ್ಷದ ಆಯವ್ಯಯ ಅಂದಾಜುಗಳು ಪ್ರಮುಖ ಸೂಚಕಗಳಾಗಿವೆ. ಪ್ರಸಕ್ತ ಆಯವ್ಯಯ ಅಂದಾಜು ಸೇರಿದಂತೆ ಹಿಂದಿನ ಏಳು ವರ್ಷಗಳ ಕಾಲಾನುಕ್ರಮ ದತ್ತಾಂಶವನ್ನು ಕೂಡ ಒದಗಿಸಲಾಗಿದೆ. ರಾಜಸ್ವ ಜಮೆಗಳು, ಸಾಲಗಳು ಹಾಗೂ ಮುಂಗಡಗಳ ವಸೂಲಿಗಳು, ನಾನಾ ರೀತಿಯ ಬಂಡವಾಳ ವೆಚ್ಚ, ಸಾರ್ವಜನಿಕ ಋಣದಲ್ಲಿ ಹೆಚ್ಚಳ, ಸಾರ್ವಜನಿಕ ಲೆಕ್ಕ ಹಾಗೂ ರಾಜಸ್ವ ವೆಚ್ಚದ ಮೇರೆಗಿನ ನಿಧಿಗಳನ್ನು ಸೇರಸಿಕೊಂಡಂತೆ ಸಂಚಿತ ನಿಧಿಯಿಂದ ನಿವ್ವಳ ಜಮೆಗಳು, ಅಭಿವೃದ್ಧಿ ಹಾಗೂ ಇತರ ಉದ್ದೇಶಗಳಿಗಾಗಿ ಸಾಲ ನೀಡುವಿಕೆ, ಬಂಡವಾಳ ವೆಚ್ಚ, ಸಂಚಿತ ನಿಧಿ, ನಗದು ಶಿಲ್ಕಿನಲ್ಲಿ ಇಳಿಕೆ/ಏರಿಕೆ ಇಂತಹ ನಿಧಿ ಮೂಲಗಳನ್ನು ಕೋಷ್ಟಕ ರೂಪದಲ್ಲಿ ತೋರಿಸಲಾಗಿದೆ. ಮುಂದಿನ ಹಣಕಾಸು ವರ್ಷದಲ್ಲಿ, ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ದೊರೆಯಬಹುದಾದ ಮೊತ್ತಗಳನ್ನು ತೋರಿಸಲಾಗಿದೆ.

ಈ ದಾಖಲೆಪತ್ರದಲ್ಲಿ ಆರ್ಥಿಕ ಕೊರತೆ, ವಿತ್ತ ಸೂಚ್ಯಂಕಗಳ ಕುರಿತಾದ 7 ವರ್ಷಗಳ ಕಾಲಾನುಕ್ರಮಣಿಕೆ ದತ್ತಾಂಶ, ನಿಧಿಗಳ ಮೂಲಗಳು ಮತ್ತು ಅನ್ವಯಿಕೆ, ನಗರ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸುವ ಮೊತ್ತಗಳು, ಪ್ರಾಪ್ತಿ, ರಾಜ್ಯ ಸರ್ಕಾರವು ಒದಗಿಸಿದ ನಿಚ್ಚಳ ರೂಪದ ಸಹಾಯಧನ, ಮಾರ್ಚ್ 31ರ ಕೊನೆಯಲ್ಲಿದ್ದಂತೆ ಷೇರು ರೂಪದ ಹೂಡಿಕೆಗಳು, ಮಾರ್ಚ್ 31ರ ಕೊನೆಯಲ್ಲಿ ಬಾಕಿಯಿರುವ ಸಾಲಗಳು ಹಾಗೂ ಮುಂಗಡಗಳು, ಹೊಣೆಗಾರಿಕೆಗಳ ಮಟ್ಟ ಹಾಗೂ ಸಂಯೋಜನೆ, ನೀಡಿದ ಖಾತರಿಗಳು, ತೆರಿಗೆ ಬಾಕಿಗಳು, ಬಜೆಟೇತರ ಸಾಲಗಳು ಮತ್ತು ಕ್ರೋಢೀಕೃತ ಕೊರತೆಗಳು (ಮುಂದಿನ ವರ್ಷದ ಆಯವ್ಯಯ ಅಂದಾಜು) ಬಜೆಟ್ ನೋಟ, ವಾರ್ಷಿಕ ವಿತ್ತೀಯ ನಿರೂಪಣೆ ಮತ್ತು ಅನುದಾನಗಳ ಅಭಿಯಾಚನೆ ಬೇಡಿಕೆಗಳು – ಇವುಗಳ ನಡುವಿನ ಸಮನ್ವಯಿಕ ಮಾಹಿತಿ ಕೂಡ ಒದಗಿಸಲಾಗಿದೆ.

**ಜೆ. ಆಯವ್ಯಯದ ಮುಖ್ಯಾಂಶಗಳು:**

ಈ ದಾಖಲೆಪತ್ರವು ಬಜೆಟ್‌ನ ಉಪಕ್ರಮಗಳ ಬಗ್ಗೆ ತ್ವರಿತ ನೋಟವನ್ನು ಒದಗಿಸುತ್ತದೆ. ಇದು, ಇತರ ವಿಷಯಗಳ ಜೊತೆಗೆ ಬಜೆಟ್‌ನ ಮುಖ್ಯಾಂಶಗಳು, ಆದ್ಯತಾ ವಲಯಗಳಿಗಾಗಿ ಹಂಚಿಕೆ, ಕೃಷಿ ಸಂಬಂಧಿತ ಚಟುವಟಿಕೆಗಳು, ಜಲಸಂಪನ್ಮೂಲ ಮತ್ತು ನೀರಾವರಿ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಮೂಲಸೌಕರ್ಯ ಅಭಿವೃದ್ಧಿ, ರೈಲ್ವೆ ಜಾಲದ ವಿಸ್ತರಣೆ, ಬಂದರುಗಳ ಅಭಿವೃದ್ಧಿ, ವಿಮಾನ ನಿಲ್ದಾಣಗಳು, ವಿದ್ಯುತ್ ಉತ್ಪಾದನೆಗಾಗಿ ಯೋಜನೆ, ಸಮಾಜ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವಸತಿ, ಕೌಶಲ್ಯ ತರಭೇತಿಗಾಗಿ ಸಹಾಯಧನ, ಆಹಾರ, ಕೈಗಾರಿಕೆಗಳ ಅಭಿವೃದ್ಧಿಗಾಗಿ ಪ್ರೋತ್ಸಾಹಕಗಳು, ನೇಕಾರರಿಗಾಗಿ ನೆರವು, ಪಶುಸಂಗೋಪನೆ ಹಾಗೂ ಹೈನುಗಾರಿಕೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಶಾಶ್ವತ ನೀರು ಸರಬರಾಜಿಗಾಗಿ ಯೋಜನೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇವುಗಳ ವಿವರವನ್ನು ಒದಗಿಸುತ್ತದೆ.

**ಕೆ. ಆಯವ್ಯಯದ ಮೇಲೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವರದಿ (ಎಟಿಆರ್):**

ಈ ದಾಖಲೆಯು ಹಿಂದಿನ ಬಜೆಟ್ ಭಾಷಣದಲ್ಲಿನ ಆರ್ಥಿಕ ಸಚಿವರ ಘೋಷಣೆಗಳ ಅನುಷ್ಠಾನದ ಸ್ಥಿತಿಗತಿಯನ್ನು ಒಳಗೊಂಡಿದೆ. ಇಲಾಖಾವಾರು ಬಜೆಟ್ ಭಾಷಣದ ಕಂಡಿಕೆ ಸಂಖ್ಯೆ, ಬಜೆಟ್ ಭಾಷಣದ ವಿವರ ಮತ್ತು ತೆಗೆದುಕೊಂಡ ಕ್ರಮವನ್ನು ಒದಗಿಸಲಾಗಿದೆ. ಇದು, ಸಾಮಾನ್ಯವಾಗಿ ಆಯವ್ಯಯ ಮಂಡನೆಯಾಗುವುದಕ್ಕಿಂತಲೂ ಮುಂಚೆ ಜನವರಿ 31 ರಂದು ಇದ್ದ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

**ಎಲ್. ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರಗಳು:**

ಈ ದಾಖಲೆಪತ್ರದಲ್ಲಿ, ಎಂಟು ಯೋಜನಾ ಹಂಚಿಕೆಗಳ ವಿವರಗಳನ್ನು ನೀಡಲಾಗಿದೆ:

1. ನಿರೂಪಣೆ I – ರಾಜ್ಯ ಯೋಜನೆ ಕುರಿತಾದ ವಲಯವಾರು ಹಂಚಿಕೆ.
2. ನಿರೂಪಣೆ II – ಕೇಂದ್ರ ಪ್ರಾಯೋಜಿತ ಯೋಜನಾ ಕಾರ್ಯಕ್ರಮಗಳ ಕುರಿತಾದ ವಲಯವಾರು ಹಂಚಿಕೆ.
3. ನಿರೂಪಣೆ III – ಕೇಂದ್ರ ಯೋಜನಾ ಕಾರ್ಯಕ್ರಮಗಳ ಕುರಿತಾದ ವಲಯವಾರು ಹಂಚಿಕೆ.
4. ನಿರೂಪಣೆ IV – ಅಭಿವೃದ್ಧಿ ಶೀರ್ಷಿಕೆಗಳಿಗೆ ಹಣದ ಏರ್ಪಾಡುಗಳು (ವಲಯವಾರು ಅಂದಾಜುಗಳು) – ರಾಜ್ಯ ಯೋಜನೆ
5. ನಿರೂಪಣೆ V – ಅಭಿವೃದ್ಧಿ ಶೀರ್ಷಿಕೆಗಳಿಗೆ ಹಣದ ಏರ್ಪಾಡುಗಳು – ಕೇಂದ್ರ ಪ್ರಾಯೋಜಿತ ಯೋಜನೆಗಳು (ಸಿಎಸ್‌ಎಸ್)

6. ನಿರೂಪಣೆ VI– ಅಭಿವೃದ್ಧಿ ಶೀರ್ಷಿಕೆಗಳಿಗೆ ಹಣದ ಏರ್ಪಾಡುಗಳು – ಕೇಂದ್ರ ಯೋಜನಾ ಕಾರ್ಯಕ್ರಮಗಳು (ಸಿಪಿಎಸ್)

7. ನಿರೂಪಣೆ VII – ಮುಖ್ಯ ಲೆಕ್ಕಶೀರ್ಷಿಕೆವಾರು ಯೋಜನಾ ಹಂಚಿಕೆಗಳ ಸಾರಾಂಶ

8. ನಿರೂಪಣೆ VIII– ರಾಜ್ಯ ಯೋಜನೆ, ಸಿಎಸ್‌ಎಸ್ ಮತ್ತು ಸಿಪಿಎಸ್ ಹಂಚಿಕೆಗಳ ವಿವರಗಳು.

**ಎಂ. ಆಯವ್ಯಯ ಜ್ಞಾಪನ ಪತ್ರ (ಖಾತರಿ, ಷೇರುಗಳು, ಸೆಕ್ಯೂರಿಟಿ ಇತ್ಯಾದಿಗಳ ವಿವರಗಳು):**

ಆಯವ್ಯಯ ಜ್ಞಾಪನ ಪತ್ರದಲ್ಲಿ ಕಂಪನಿಗಳು, ನಿಗಮಗಳು, ಮಂಡಳಿಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳು ಪಡೆದಿರುವ ಸಾಲಗಳಿಗೆ, ಹಲವಾರು ಕೈಗಾರಿಕಾ ಉದ್ಯಮ ಸಂಸ್ಥೆಗಳಲ್ಲಿ ಸರ್ಕಾರವು ತೆಗೆದುಕೊಂಡಿರುವ ಷೇರುಗಳಿಗೆ, ಸರ್ಕಾರ ಹಾಗೂ ಸಾರ್ವಜನಿಕ ಋಣ ಸಂದಾಯದಿಂದ ಇರುವ ಸೆಕ್ಯೂರಿಟಿಗಳ ಪಟ್ಟಿಗೆ ಸಂಬಂಧಪಟ್ಟಂತೆ ಸರ್ಕಾರವು ನೀಡಿದ ಖಾತರಿಗಳ ಬಗೆಗಿನ ವಿವರಗಳು ಒಳಗೊಂಡಿರುತ್ತವೆ. ಈ ವಿವರಗಳನ್ನು ನಾಲ್ಕು ಅನುಬಂಧಗಳಲ್ಲಿ ಪ್ರಸ್ತುತಪಡಿಸಲಾಗಿದೆ. ಅನುಬಂಧ–1, ಆ ವರ್ಷದ ಮಾರ್ಚ್ 31 ರಂದು ಇದ್ದಂತೆ ಸ್ಥಳೀಯ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳು ಪಡೆದಿರುವ ಸಾಲಗಳಿಗೆ ಸಂಬಂಧಪಟ್ಟಂತೆ ಕರ್ನಾಟಕ ಸರ್ಕಾರವು ನೀಡಿರುವ ಖಾತರಿಗಳ ವಿವರಣಾ ಪಟ್ಟಿಯಾಗಿದೆ. ಅನುಬಂಧ–11 ಹಲವಾರು ಕೈಗಾರಿಕಾ ಉದ್ಯಮ ಸಂಸ್ಥೆಗಳಲ್ಲಿ ಕರ್ನಾಟಕ ಸರ್ಕಾರವು ತೆಗೆದುಕೊಂಡಿರುವ ಷೇರು ಡಿಬೆಂಚರುಗಳ/ ಬಾಂಡುಗಳ ಮೊತ್ತದ ಹಾಗೂ ವರ್ಷದ ಅವಧಿಯಲ್ಲಿ ಸ್ವೀಕರಿಸಲಾದ ಲಾಭ/ ಬಡ್ಡಿಯ ವಿವರಣಾ ಪಟ್ಟಿಯಾಗಿದೆ. ಅನುಬಂಧ–III ಭದ್ರತೆಗಳ ಪಟ್ಟಿಯನ್ನು ಸೂಚಿಸುತ್ತದೆ. ಅನುಬಂಧ–IV ಸಾರ್ವಜನಿಕ ಸಾಲದ ಮತ್ತು ಭಾರತ ಸರ್ಕಾರ ಹಾಗೂ ಇತರ ಸಂಸ್ಥೆಗಳಿಗೆ ಬಾಕಿ ಇರುವ ಸಾಲಗಳ ಸ್ಥಿತಿಗತಿಯನ್ನು ತೋರಿಸುತ್ತದೆ.

**ಎನ್. ಮಹಿಳಾ ಉದ್ದೇಶಿತ ಆಯವ್ಯಯ:**

ಮಹಿಳಾ ಉದ್ದೇಶಿತ ಆಯವ್ಯಯ ವಿವರಣಾ ಪಟ್ಟಿಯು, ಮಹಿಳೆಯರಿಗೆ ಸಂಬಂಧಿಸಿದ ಆಯವ್ಯಯ ಹಂಚಿಕೆಯ ನಾಗರಿಕಸ್ನೇಹಿ ಪ್ರಕಟಣೆಯಾಗಿದೆ. ಇದನ್ನು 2007–08 ರಿಂದ ಹೊರತರಲಾಗುತ್ತಿದೆ. ಮಹಿಳಾ ಉದ್ದೇಶಿತ ಪ್ರತ್ಯೇಕವಾದ ಅಂಕಿ ಅಂಶಗಳು ಮಹಿಳಾ ಉದ್ದೇಶಿತ ಆಯವ್ಯಯ ಮಂಡನೆಯ ಆಳವಾದ ವಿಶ್ಲೇಷಣೆಗೆ ಮುಂದೆ ಅನುವಾಗುತ್ತದೆ. ಇಂತಹ ವಿವರದಿಂದ ಸರ್ಕಾರವು ಅಗತ್ಯತೆ ಅಧಾರಿತ ನೀತಿ ರಚನೆಗೆ ಮುಂದಾಗಲು ಮತ್ತು ಮಹಿಳೆಯರ ಅದರಲ್ಲೂ ನಿರ್ದಿಷ್ಟವಾಗಿ ಅವರಲ್ಲಿ ದುರ್ಬಲರಾದವರ ಕ್ಷೇಮಾಭಿವೃದ್ಧಿಗೆ ರಾಜ್ಯ ನೆರವಿಗಾಗಿ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ವೆಚ್ಚದ ಅತಿ ಉತ್ತಮ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ

ದಾಖಲೆಯು ಅನುದಾನಗಳ ಅಭಿಯಾಚನೆಯಲ್ಲಿ ಪ್ರತಿಬಿಂಬಿತವಾದಂತೆ ಮಹಿಳಾ ಉದ್ದೇಶಿತ ಆಯವ್ಯಯ ಹಂಚಿಕೆಯನ್ನು ಪ್ರಸ್ತುತಪಡಿಸುತ್ತದೆ. ಈ ಹಂಚಿಕೆಗಳನ್ನು ಎರಡು ಪ್ರವರ್ಗಗಳಲ್ಲಿ ಪ್ರಸ್ತುತಗೊಳಿಸಲಾಗಿದೆ; ಮಹಿಳೆಯರಿಗೆ ವಿಶಿಷ್ಟವಾಗಿ ಶೇ 100ರಷ್ಟು ಪ್ರಯೋಜನವಾಗುವಂತೆ ರೂಪಿಸಲಾದ ಯೋಜನೆಗಳ ಆಯವ್ಯಯ ಹಂಚಿಕೆಗಳನ್ನು ಪ್ರವರ್ಗ 'ಎ' ಎಂದು ಮತ್ತು ಹಂಚಿಕೆಗಳ ಕನಿಷ್ಟ ಶೇ 30ರಷ್ಟು ಮಹಿಳೆಯರಿಗೆ ಪ್ರಯೋಜನವಾಗುವ ಯೋಜನೆಗಳನ್ನು ಪ್ರವರ್ಗ 'ಬಿ' ಎಂದೂ ವರ್ಗೀಕರಿಸಲಾಗಿದೆ..

**ಒ. ಆಯವ್ಯಯ ಅಂದಾಜುಗಳು ಅನುಬಂಧ–ಬಿ (ರಾಜ್ಯ ಮಟ್ಟದ್ದು):**

ಈ ದಾಖಲೆಯಲ್ಲಿ ಪತ್ರದಲ್ಲಿ ರಾಜ್ಯ ವಲಯದಲ್ಲಿ ಮತ್ತು ಸಿಬ್ಬಂದಿವರ್ಗದ ವೇತನ ವೆಚ್ಚದ ಅಂದಾಜುಗಳ ವಿವರಗಳನ್ನು ನೀಡಲಾಗಿದೆ. ಪ್ರಧಾನ ಲೆಕ್ಕಶೀರ್ಷಿಕೆಯನ್ವಯ, ಮಾರ್ಚ್ 1ರಂದು ಇದ್ದಂತೆ ಮಂಜೂರಾದ ಹುದ್ದೆಗಳ ಸಂಖ್ಯೆ ಸಹಿತ ಸಾಮಾನ್ಯ, ಸಾಮಾಜಿಕ ಮತ್ತು ಆರ್ಥಿಕ ಸೇವೆಗಳ ವರ್ಗೀಕರಣ ರೀತ್ಯಾ ವಿವರಗಳು ಲಭ್ಯವಿವೆ.

**ಪಿ. ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ವೇತನದ ವಿವರ ಅನುಬಂಧ–ಬಿ (ಸಿಬ್ಬಂದಿ):**

ಈ ದಾಖಲೆಯು ಮಾರ್ಚ್ 1 ರಂದು ಇದ್ದಂತೆ, ಮಂಜೂರಾದ ಹುದ್ದೆಗಳ ಸಂಖ್ಯೆ ಸಹಿತ ಪ್ರಧಾನ ಲೆಕ್ಕಶೀರ್ಷಿಕೆಯನ್ವಯ, ವೇತನ ಶ್ರೇಣಿಯನ್ವಯ, ಜಿಲ್ಲಾವಾರು ವೇತನಕ್ಕೆ ಅವಕಾಶ ಮಾಡಿರುವ ಹುದ್ದೆಗಳ ಸಂಖ್ಯೆಯನ್ನು ತೋರಿಸುವ ವಿವರಣಾ ಪಟ್ಟಿಯನ್ನು ಹೊಂದಿದೆ.

**ಕ್ಯೂ. ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ, ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಡಿಪಿ) ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಮತ್ತು ಗಿರಿಜನ ಉಪ ಯೋಜನೆ (ಟಿಎಸ್‌ಪಿ):**

ಈ ದಾಖಲೆಯು ಮೂರು ಭಾಗಗಳನ್ನು ಹೊಂದಿದೆ. ಅವೆಂದರೆ (1) ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ (2) ವಿಶೇಷ ಅಭಿವೃದ್ಧಿ ಯೋಜನೆ, (3) ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಮತ್ತು ಗಿರಿಜನ ಉಪ ಯೋಜನೆ (ಟಿಎಸ್‌ಪಿ). ಭಾಗ ಒಂದರಲ್ಲಿ 'ಯೋಜನಾ ಕಾರ್ಯಕ್ರಮಗಳಿಗೆ ಹಣದ ವಿವರ' ಎಂದು ಹೆಸರಿಸಲಾದ ದಾಖಲೆಯಿಂದ ಮೂರು ಪಟ್ಟಿಗಳ ಅಡಿಯಲ್ಲಿ ನಿಧಿ ಹಂಚಿಕೆಗಳನ್ನು ಪುನರುಚ್ಚರಿಸುತ್ತದೆ. ಭಾಗ ಎರಡರಲ್ಲಿ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಡಾ. ನಂಜುಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಪ್ಯಾಕೇಜ್ ರೂಪದಲ್ಲಿ

ವಲಯವಾರು/ ಸ್ಕೀಮ್‌ವಾರು ನಿಧಿ ಹಂಚಿಕೆಗಳನ್ನು ನೀಡಲಾಗಿದೆ. ಭಾಗ ಮೂರರಲ್ಲಿ ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಗಾಗಿ ಅಭಿಯಾಚನೆಯನ್ವಯ ರಾಜ್ಯ–ವಿಶೇಷ ಘಟಕ ಯೋಜನೆ, ಜಿಲ್ಲಾ ವಿಶೇಷ ಘಟಕ ಯೋಜನೆ ಹಾಗೂ ಒಟ್ಟುಗೂಡಿಸಿದ ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೂಪು ರೇಷೆಗಳ ವಿವರಗಳನ್ನು ನೀಡಲಾಗಿದೆ. ಗಿರಿಜನ ಉಪಯೋಜನೆಗಾಗಿಯೂ (ಟಿಎಸ್‌ಪಿ) ಇದೇ ರೀತಿಯ ವಿವರಗಳನ್ನು ನೀಡಲಾಗಿದೆ.

**ಆರ್. ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಿರುವ ಯೋಜನೆ ಮತ್ತು ಯೋಜನೇತರ ಹಣದ ವಿವರ (ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಕಾರ್ಯಕ್ರಮಗಳನ್ವಯ)**

ಈ ದಾಖಲೆಗಳು ರಾಜ್ಯ ಆಯವ್ಯಯದಿಂದ ಪಂಚಾಯತ್ ರಾಜ್ ಸಂಸ್ಥೆಗಳ ಆಯವ್ಯಯಕ್ಕೆ ಅನುದಾನಗಳ ಲೆಕ್ಕಶೀರ್ಷಿಕೆ ಸಂಪರ್ಕವನ್ನೇರ್ಪಡಿಸುತ್ತದೆ. ಅವುಗಳ ಅನುಷ್ಠಾನದ ವ್ಯಾಪ್ತಿಯಲ್ಲಿರುವ ಯೋಜನೆಗಳಿಗಾಗಿ ಒಟ್ಟಾರೆ ಹಂಚಿಕೆಯನ್ನು ಒದಗಿಸಲಾಗಿದೆ. ಈ ದಾಖಲೆಯನ್ನು ರಾಜ್ಯದ ನಾಲ್ಕು ವಲಯಗಳಿಗೆ ಅಂದರೆ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಗಳಿಗೆ ಸಂಬಂಧಿಸಿದಂತೆ ನಾಲ್ಕು ಸಂಪುಟಗಳಲ್ಲಿ ವ್ಯವಸ್ಥೆಗೊಳಿಸಲಾಗಿದೆ. ಪ್ರತಿಯೊಂದು ಸಂಪುಟವು ಯೋಜನೆ ಹಾಗೂ ಯೋಜನೇತರ ಹಂಚಿಕೆಗಳನ್ನು ಪ್ರತ್ಯೇಕ ಭಾಗಗಳಲ್ಲಿ ಹೊಂದಿರುತ್ತದೆ. ಈ ದಾಖಲೆಗಳು ಲೋಕರೂಢಿಯಾಗಿ ಸಂಪರ್ಕ ದಾಖಲೆಗಳೆಂದು (ಲಿಂಕ್ ಡಾಕ್ಯುಮೆಂಟ್ಸ್) ಪರಿಚಿತವಾಗಿವೆ.

**ಟಿಪ್ಪಣಿ:**

(1) ಸರ್ಕಾರವು ವರ್ಷದ ಅವಧಿಯಲ್ಲಿ ಕಾಲಕಾಲಕ್ಕೆ ಪೂರಕ ಅನುದಾನದ ಅಭಿಯಾಚನೆಗಳನ್ನೂ ಸಹ ಸಲ್ಲಿಸುತ್ತದೆ.

(2) ಹಣಕಾಸು ಲೆಕ್ಕ ಪತ್ರಗಳು, ವಿನಿಯೋಗದ ಲೆಕ್ಕಗಳು ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರಿಂದ (ಸಿ ಮತ್ತು ಎಜಿ) ಸ್ವೀಕರಿಸಿದ ನಂತರ ಮತ್ತು ಮಾನ್ಯ ರಾಜ್ಯಪಾಲರ ಅನುಮೋದನೆ [ಭಾರತ ಸಂವಿಧಾನದ ಅನುಚ್ಛೇದ 149, 151(2)ರೊಂದಿಗೆ ಓದಲಾದ (ಸಿ ಮತ್ತು ಎಜಿರವರ ಕರ್ತವ್ಯಗಳು, ಅಧಿಕಾರಗಳು ಹಾಗೂ ಸೇವಾ ಷರತ್ತುಗಳ (ಡಿಪಿಸಿ) ಅಧಿನಿಯಮ 1971 ರ ಉಪಬಂಧಗಳು] ನಂತರ ವಿಧಾನ ಮಂಡಲಕ್ಕೆ ಮಂಡಿಸಲಾಗುತ್ತದೆ.

***